# <u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>

**ಉಪಸ್ಥಿತರುಃ** **ಶ್ರೀ ಶ್ಯಾಮ್ ಪ್ರಕಾಶ,** ಬಿ.ಎ.ಎಲ್. ಎಲ್.ಎಲ್.ಬಿ,

**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ ತಿ.ನರಸೀಪುರ.**

**<u>ಸಿ.ಸಿ. ಸಂಖ್ಯೆ 68/2023</u>**

**ಕರ್ನಾಟಕ ರಾಜ್ಯ**
(ಬನ್ನೂರು ಪೋಲೀಸರಿಂದ) -----**ಫಿರ್ಯಾದಿ**

**ವಿರುದ್ಧ**

ಸಂತೋಷ್ ಕುಮಾರ್,
ಬಿನ್. ವೆಂಕಟೇಶ,
ವಯಸ್ಸು ಸುಮಾರು 30 ವರ್ಷ,
ವಾಸ ಮಾಕನಹಳ್ಳಿ ಗ್ರಾಮ,
ಬನ್ನೂರು ಹೋಬಳಿ,
ತಿ.ನರಸೀಪುರ ತಾಲ್ಲೂಕು. ---**ಆರೋಪಿ**

## <u>- ಆರೋಪಣೆ :-</u>

ದಿನಾಂಕ : 10.02.2022 ರಂದು ಸಂಜೆ 6.45 ಗಂಟೆ ಸಮಯದಲ್ಲಿ ಟಿ.ನರಸೀಪುರ ತಾಲ್ಲೂಕು, ಬನ್ನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಾಕನಹಳ್ಳಿ ಗ್ರಾಮದ ಸ್ವೀಪರ್ ಕಾಲೋನಿಯ ಅಮಾಸಮ್ಮ ಕೋಂ.ರಾಮಯ್ಯ ರವರ ವಾಸದ ಮನೆ ಮುಂಭಾಗ ಹಾದು ಹೋಗಿರುವ ಬನ್ನೂರು-ಶ್ರೀರಂಗಪಟ್ಟಣ ಮುಖ್ಯ ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-11-ಬಿ-5295 ರ ಗೂಡ್ಸ್ ಮಹೇಂದ್ರ ಜೀತೋ ವಾಹನವನ್ನು ಬನ್ನೂರು ಕಡೆಯಿಂದ ಶ್ರೀರಂಗಪಟ್ಟಣದ ಕಡೆಗೆ ಮಾನವ ಪ್ರಾಣಕ್ಕೆ ಅಪಾಯ ಉಂಟಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಎಡಬದಿಯಲ್ಲಿ ನಂಬರ್ ನಮೂದಾಗಿರ ಇಂಜಿನ್ ನಂ.ಪಿ1002 ಎಂ224446, ಚಾಚಿಸ್ ನಂ.ಪಿ3002 ಎಪ್225645 ನಂಬರಿನ ಸನಾ ಉಲ್ಲಾ ರವರ ಟಿ.ವಿ.ಎಸ್ ಎಕ್ಸೆಲ್ ಸ್ಕೂಟರ್ ಹಿಂಭಾಗಕ್ಕೆ ಡಿಕ್ಕಿ ನಂತರ ರಸ್ತೆ ಬದಿ

ನಿಂತಿದ್ದ ಚಾಸಾ.2 ರವರಿಗೂ ಡಿಕ್ಕಿ ಮಾಡಿ ಅಪಘಾತ ಮಾಡಿದ್ದು, ನಿಮ್ಮ ಈ ಕ್ರಮ ಭಾದಂ.ಸಂ. ಕಲಂ.279 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ಸದರಿ ವಾಹನವನ್ನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಂಬರ್ ನಮೂದಾಗಿರ ಇಂಜಿನ್ ನಂ.ಪಿ1002 ಎಂ224446, ಚಾಚಿಸ್ ನಂ.ಪಿ3002 ಎಫ್225645 ನಂಬರಿನ ಸನಾ ಉಲ್ಲಾ ರವರ ಟಿ.ವಿ.ಎಸ್ ಎಕ್ಸೆಲ್ ಸ್ಕೂಟರ್ ಗೆ ಡಿಕ್ಕಿ ಮಾಡಿ ಅಪಘಾತ ಮಾಡಿದ ಪರಿಣಾಮ ಸದರಿ ಟಿ.ವಿ.ಎಸ್ ಎಕ್ಸೆಲ್ ಸ್ಕೂಟರ್ ಸವಾರ ಸನಾ ಉಲ್ಲಾ ರವರು ವಾಹನ ಸಮೇತ ಕೆಳಕ್ಕೆ ಬಿದ್ದು ತಲೆಗೆ, ಬಲಗಾಲಿನ ಮಂಡಿ, ಎಡ ಮೊಣಕಾಲು, ಹಿಮ್ಮಡಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಪ್ರಜ್ಞೆ ತಪ್ಪಿ ಹೋಗಿ ನಂತರ ದಿನಾಂಕ 11.02.2022 ರಂದು ಬೆಳಿಗ್ಗೆ 4.45 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಕೆ.ಆರ್.ಅಸ್ಪತ್ರೆಯಲ್ಲಿ ಮೃತಪಟ್ಟಿದ್ದು, ನಿಮ್ಮ ಈ ಕ್ರಮ ಭಾ.ದಂ.ಸಂ. ಕಲಂ. 304(ಎ) ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ಸದರಿ ವಾಹನವನ್ನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಂಬರ್ ನಮೂದಾಗಿರ ಇಂಜಿನ್ ನಂ.ಪಿ1002 ಎಂ224446, ಚಾಚಿಸ್ ನಂ.ಪಿ3002 ಎಫ್225645 ನಂಬರಿನ ಸನಾ ಉಲ್ಲಾ ರವರ ಟಿ.ವಿ.ಎಸ್ ಎಕ್ಸೆಲ್ ಸ್ಕೂಟರ್ ಗೆ ಡಿಕ್ಕಿ ಮಾಡಿ ಅಪಘಾತ ಮಾಡಿದ ನಂತರ ರಸ್ತೆ ಬದಿ ನಿಂತಿದ್ದ ಚಾಸಾ.2 ರವರಿಗೂ ಡಿಕ್ಕಿ ಮಾಡಿ ಅಪಘಾತ ಮಾಡಿದ ಪರಿಣಾಮ ಚಾಸಾ.2 ರವರ ಬಲ ಗಣ್ಣಿನ ಉಬ್ಬಿನ ಬಳಿ ಮತ್ತು ಹಣೆಯ ಭಾಗಕ್ಕೆ ಹಾಗೂ ಎಡಗೈ ಮಣಿಕಟ್ಟಿನ ಬಳಿ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ನಿಮ್ಮ ಈ ಕ್ರಮ ಭಾ.ದಂ.ಸಂ. ಕಲಂ. 337 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ಸದರಿ ಅಪಘಾತದ ನಂತರ ವಿಚಾರವನ್ನು ಪೊಲೀಸರಿಗೆ ತಿಳಿಸದೆ ಹಾಗೂ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೆ ವಾಹನ ಸಮೇತ ಸ್ಥಳದಿಂದ ಪರಾರಿಯಾಗಿದ್ದು, ನಿಮ್ಮ ಈ ಕ್ರಮ ಭಾರತೀಯ ಮೋಟಾರು ವಾಹನ ಅಧಿನಿಯಮದ ಕಲಂ.134(a) & (b) R/W 187 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಪ್ರಶ್ನೆ: 1 ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ ಃ

ಪ್ರಶ್ನೆ: 2 ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೊ?

ಉತ್ತರ ಃ

**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.**

**ತಿ.ನರಸೀಪುರ**

ದಿನಾಂಕಃ 03-07-2024